**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 182/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿ ಡಬ್ಲ್ಯೂ.01**

**ದಿನಾಂಕಃ 21.12.2024**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಇ ಎಂ ವಕೀಲರಿಂದಃ**

ನಾನು ಮೂಲತಃ ಕೂಡ್ಲಿಗಿ ತಾಲೂಕು ಮಂಗಾಪುರ ಗ್ರಾಮದ ವಾಸಿ. ನಾನು ಹುಟ್ಟಿದಾಗಿನಿಂದ 30 ವರ್ಷಗಳ ಕಾಲ ಅಲ್ಲಿಯೇ ಇದ್ದೆನು. ನಾನು ನನ್ನ ಪಿರ್ಯಾದಿಯಲ್ಲಿ ನಿಖರವಾಗಿ ಯಾವ ವೈದ್ಯರು ಎಂದು ಬರೆಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಾಮಾನ್ಯ ವೈದ್ಯರು ಎಂದು ನುಡಿಯುತ್ತಾರೆ. ನನ್ನ ಪಿರ್ಯಾದಿಯಲ್ಲಿ ನನ್ನ ವೈದ್ಯಕೀಯ ವೃತ್ತಿಯನ್ನು ಎಷ್ಟು ವರ್ಷಗಳಿಂದ ಮಾಡಿದ್ದೇನೆ ಎಂದು ಬರೆಸಿಲ್ಲ ಎಂದರೆ ಸರಿ. ನಮ್ಮ ವೈದ್ಯಕೀಯ ವೃತ್ತಿಯಲ್ಲಿ ಇಂತಿಷ್ಟೇ ಫೀ ಪಡೆಯಬೇಕು ಎಂದು ಇಲ್ಲ ಎಂದರೆ ಸರಿ. ನಾವು ಮಾಡುವುದು ಜನಸೇವೆ ಎಂದರೆ ಸರಿ. ನನ್ನ ಪಿರ್ಯಾದಿಯಲ್ಲಿ ನನಗೆ ಎಷ್ಟು ಆಸ್ತಿ ಇದೆ ಎಂದು ಬರೆಸಿಲ್ಲ ಎಂದರೆ ಸರಿ. ನನ್ನ ವೈದ್ಯಕೀಯ ವೃತ್ತಿಯಲ್ಲಿ ಹಾಗೂ ಇತರೆ ಮೂಲಗಳಿಂದ ನನಗೆ ಎಷ್ಟು ಆದಾಯ ಇದೆ ಎಂದು ಪಿರ್ಯಾದಿಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ ಎಂದರೆ ಸರಿ. ನಾನು ವೈದ್ಯ ವೃತ್ತಿಯಿಂದ ಹಾಗೂ ನನಗೆ ಜಮೀನು ಇದ್ದ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಪಿರ್ಯಾದಿಯಲ್ಲಿ ನನಗೆ ವೈದ್ಯಕೀಯ ವೃತ್ತಿಯಿಂದ ಹಾಗೂ ವ್ಯವಸಾಯದಿಂದ ಸಾಕಷ್ಟು ವರಮಾನ ಇದೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ವಿದ್ಯಾನಗರದಲ್ಲಿ ಎಷ್ಟು ವರ್ಷಗಳಿಂದ ಇದ್ದೇನೆ ಎಂದು ಪಿರ್ಯಾದಿಯಲ್ಲಿ ಬರೆಸಿಲ್ಲ ಎಂದರೆ ಸರಿ. ಆರೋಪಿ ನನಗೆ ಹೇಗೆ ಎಂದು ಪರಿಚಯ ಎಂದು ಪಿರ್ಯಾದಿಯಲ್ಲಿ ಬರೆಸಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಅಪ್ರಾಪ್ತ ವಯಸ್ಕರು, ಅಂಗವಿಕಲರು ಹಾಗೂ ಸಾಂಪ್ರದಾಯಿಕ ಪರದೆ ಹಾಕುವ ಹೆಣ್ಣು ಮಕ್ಕಳೊಂದಿಗೆ ವ್ಯವಹಾರ ಮಾಡಬೇಕಾದರೆ ಕೆಲವು ದಾಖಲೆಗಳನ್ನು ಬರೆಸಿಕೊಳ್ಳಬೇಕು ಎಂದು ನನಗೆ ಗೊತ್ತಿಲ್ಲ. ಆರೋಪಿಯೊಂದಿಗೆ ವ್ಯವಹಾರ ಮಾಡುವ ಸಂದರ್ಭದಲ್ಲಿ ಅವರಿಂದ ಅವರ ಬ್ಯಾಂಕ್ ಪಾಸ್ ಬುಕ್ ಮತ್ತು ಆಧಾರ ಕಾರ್ಡನ್ನು ಪಡೆದಿಲ್ಲ. ನನ್ನ ಪಿರ್ಯಾದಿಯಲ್ಲಿ ಆರೋಪಿ ನನ್ನ ಮನೆಗೆ ಬಂದ ಬಗ್ಗೆ ಹಾಗೂ ನಾನು ಅವರ ಮನೆಗೆ ಹೋದ ಬಗ್ಗೆ ಬರೆಸಿಲ್ಲ ಎಂದರೆ ಸರಿ. ಆರೋಪಿ ನನ್ನೊಂದಿಗೆ ವ್ಯವಹಾರ ಮಾಡಿದ ಬಗ್ಗೆ ಲಿಖಿತ ದಾಖಲೆ ಯಾವುದೂ ಇಲ್ಲ ಎಂದರೆ ಸರಿ. ಸಾಮಾನ್ಯವಾಗಿ ತನ್ನ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರದಿಂದ ಸಾಲ ಸಿಗುತ್ತದೆ ಎಂದರೆ ಸರಿ. ಅದೇ ರೀತಿ ವಯೋವೃದ್ಧರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡುತ್ತಾರೆ ಎಂದರೆ ಸಾಕ್ಷಿಯು ಸರ್ಕಾರಿ ಆಸ್ಪತ್ರೆಯಲ್ಲಿ ನೀಡುತ್ತಾರೆ, ಖಾಸಗಿ ಆಸ್ಪತ್ರೆಯಲ್ಲಿ ನೀಡುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಮಕ್ಕಳು ಏನು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ಪಿರ್ಯಾದಿಯಲ್ಲಿ ಬರೆಸಿಲ್ಲ ಎಂದರೆ ಸರಿ. ದಿಃ 10.02.2016 ರಂದು 50 ಸಾವಿರ ರೂಗಳನ್ನು ಆರೋಪಿಗೆ ನೀಡಿದ ಬಗ್ಗೆ

ದಾಖಲೆ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಸ್ನೇಹಿತರಾದ್ದರಿಂದ ನಂಬಿಕೆ ಮೇಲೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದಿಃ 28.10.2016 ರಂದು ನನಗೆ ಅಪಘಾತ ಸಂಭವಿಸಿದ್ದು ಅದರ ಪರಿಹಾರ ಧನ ಪಡೆದಿದ್ದೇನೆ ಎಂದು ಹೇಳಿದ್ದರ ಬಗ್ಗೆ ದಾಖಲಾತಿಯನ್ನು ಸಲ್ಲಿಸಿಲ್ಲ ಎಂದರೆ ಸರಿ. ಪರಿಹಾರ ಧನವನ್ನು ನನಗೆ ಬ್ಯಾಂಕ್ ಖಾತೆ ಮೂಲಕ ನೀಡಿರುತ್ತಾರೆ. ಸದರಿ ಹಣವನ್ನು ನನ್ನ ಪ್ರಗತಿ ಗ್ರಾಮೀಣ ಬ್ಯಾಂಕ್ ಹರಿಹರ ಮೂಲಕ ನೀಡಿರುತ್ತಾರೆ. ಸದರಿ ಬ್ಯಾಂಕ್ ಖಾತೆಯ ಪಾಸ್ ಬುಕ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಸದರಿ ಪಾಸ್ ಬುಕ್ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸಲು ನನಗೆ 1 ವಾರ ಸಮಯ ಬೇಕಾಗಬಹುದು. 2012 ರಿಂದ 2016 ರವರೆಗೆ ನಾನು ನನಗೆ ಬಂದ ಪರಿಹಾರ ಧನವನ್ನು ಪಡೆದು ಖರ್ಚು ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ನನ್ನ ಖಾತೆಯಲ್ಲಿ ಇಟ್ಟಿದ್ದೆನು.

ದಿಃ 29.10.2016 ರಂದು ನಾನು ಆರೋಪಿಗೆ ನೀಡಿದ ಹಣವನ್ನು ಯಾವ ರೂಪದಲ್ಲಿ ನೀಡಿದ್ದೇನೆ ಎಂದು ಪಿರ್ಯಾದಿಯಲ್ಲಿ ಬರೆಸಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಹೆಚ್ಚಿನ ಮೊತ್ತದ ಸಾಲವನ್ನು ಚೆಕ್ ಅಥವಾ ಬ್ಯಾಂಕ್ ಮುಖಾಂತರ ನೀಡುತ್ತಾರೆ ಎಂದರೆ ಸರಿ. ನಾನು ಆರೋಪಿಗೆ ಚೆಕ್ ಮುಖಾಂತರ ಹಣ ನೀಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಗದು ಹಣ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈ ರೀತಿ ಪಿರ್ಯಾದಿಯಲ್ಲಾಗಲೀ, ಮುಖ್ಯ ವಿಚಾರಣೆಯಲ್ಲಾಗಲೀ ಅಥವಾ ನೋಟೀಸನಲ್ಲಾಗಲೀ ಬರೆಸಿಲ್ಲ ಎಂದರೆ ಸರಿ. ಸದರಿ 8 ಲಕ್ಷ ರೂ ಹಣವನ್ನು ನೀಡಿದ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿ.

ದಿಃ 27.07.2017 ರಂದು ಆರೋಪಿಗೆ 2 ಲಕ್ಷ ರೂ ಹಣವನ್ನು ನಗದು ರೂಪದಲ್ಲಿ ನೀಡಿದ ಬಗ್ಗೆ ಪಿರ್ಯಾದಿಯಲ್ಲಿ ಬರೆಸಿಲ್ಲ ಎಂದರೆ ಸರಿ. ದಿಃ 27.07.2017 ರಂದು ಆರೋಪಿ ಹಣ ಕೇಳಲು ಬಂದಾಗ ಈ ಮೊದಲು ನೀಡಿದ 8 ಲಕ್ಷ ರೂಗಳನ್ನು ನೀಡಿಲ್ಲ ಎಂದು ದಾಖಲೆ ಕೇಳಲಿಲ್ಲವಾ ಎಂದರೆ ಸಾಕ್ಷಿಯು ಆರೋಪಿ ಚೆಕ್ ನ್ನು ಬರೆದುಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ನಿಪಿ.1 ನ್ನು ನನಗೆ ನೀಡಲಾಗಿದೆ ಎಂದು ತೋರಿಸಲು ಅದರ ಹಿಂಬದಿಯಲ್ಲಿ ನನ್ನ ಸಹಿ ಇಲ್ಲ ಎಂದರೆ ಸಾಕ್ಷಿಯು ಚೆಕ್ ನ್ನು ಕೊಡುವವರು ಮಾತ್ರ ಸಹಿ ಮಾಡುತ್ತಾರೆ ಪಡೆಯುವವರು ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿ ದಿಃ 27.07.2017 ಎಂದು ನಮೂದು ಇಲ್ಲ ಎಂದರೆ ಸರಿ. ನಿಪಿ.1 ರಲ್ಲಿ ದಿಃ 05.03.2018 ಎಂದು ನಮೂದಿಸಿ ಚೆಕ್ ನ್ನು ನೀಡಿದ ಬಗ್ಗೆ ಪಿರ್ಯಾದಿ ಹಾಗೂ ನೋಟೀಸನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ನ್ನು ಆರೋಪಿ ನನಗೆ ನೀಡುವ ಸಂದರ್ಭದಲ್ಲಿ ಹೆಸರು ,ಮೊತ್ತ ದಿನಾಂಕ ಎಲ್ಲವನ್ನು ಬರೆದು ನೀಡಿದ್ದರು ಎಂದರೆ ಸರಿ. ನನ್ನ ಪಿರ್ಯಾದಿ, ಮುಖ್ಯ ವಿಚಾರಣೆಯಲ್ಲಿ ಆರೋಪಿ ಖಾಲಿ ಚೆಕ್ ನ್ನು ನೀಡಿದ್ದರು ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ